ಕಬ್ಬಿಗೆ ವಿಕರೂಪ ದರ ನಿಗದಿ ಬಗ್ಗೆ

362 (664) ಶ್ರೀ ಎಂ.ಎನ್. ಆತ್ಮಾನಂದ (ಮಂಡ್ಯ) : ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳಿಗೆ ರೈತರು ಸರಬರಾಜು ಮಾಡುವ ಕಬ್ಬಿಗೆ ಭವಿಷ್ಯದಲ್ಲಿ "ಎಕರೂಪ ದರ" ನಿಗದಿಪಡಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ. ಹಾಗಿದ್ದಲ್ಲಿ ಆ ಪ್ರಸ್ತಾವನೆಯ ವಿವರಗಳೇನು?

ಇ. "ಎಕರೂಪ ದರ" ನಿಗದಿಪಡಿಸುವಾಗ್ಗೆ ಸರ್ಕಾರ ಅನುಸರಿಸುವ ಮಾನದಂಡಗಳೇನು?

ಶ್ರೀ ಎಂ. ಮಹಾದೇವ್, (ಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ. ಇಲ್ಲ

ಆ. ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ

ರಾಜ್ಯದ ಕಬ್ಬು ಅಭಿವೃದ್ಧಿ ನಿಧಿಯಿಂದ ಕೈಗೊಂಡಿರುವ ರೈತರ ಕಲ್ಯಾಣ ಕಾರ್ಯಕ್ರಮ

364 (666) ಶ್ರೀ ಆತ್ಮಾನಂದ (ಮಂಡ್ಯ ಕ್ಷೇತ್ರ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳು ಕಬ್ಬು ಅಭಿವೃದ್ಧಿ ನಿಧಿಯಿಂದ ಪಡೆದು ಕೊಂಡಿರುವ ಅನುದಾನವೆಷ್ಟು? (ಕಾರ್ಖಾನೆಗಳ ಪ್ರತ್ಯೇಕ ವಿವರ ನೀಡುವುದು)

ಆ. ಕಬ್ಬು ಅಭಿವೃದ್ಧಿ ನಿಧಿಯನ್ನು ರೈತರಿಗೆ ಸಂಬಂದಿಸಿದಂತೆ ಯಾವ್ಯಾವ ಕಲ್ಯಾಣ ಕಾರ್ಯಕ್ರಮಕ್ಕೆ ವಿನಿಯೋಗಿಸಲಾಗಿದೆ ಇದರ ವಿವರಗಳೇನು?

ಶ್ರೀ ಎಂ.ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ. ರಾಜ್ಯದ ಸಕ್ಕರೆ ಕಾರ್ಖಾನೆಗಳು ಕೇಂದ್ರ ಸರ್ಕಾರದ ಕಬ್ಬು ಅಭಿವೃದ್ಧಿ ನಿಧಿಯಿಂದ ಪಡೆದುಕೊಂಡಿರುವ ಅನುದಾನದ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಕಾರ್ಖಾನೆ ಹೆಸರು	ಅನುದಾನ ಮಂಜೂರಾದ ಮೊತ್ತ ರೂ. ಲಕ್ಷಗಳಲ್ಲಿ
1.	ಹಿರಣ್ಯಕೇಶಿ ಸಸಕಾ(ನಿ) ಸಂಕೇಶ್ವರ	178.50
2.	ಮೈಶುಗರ್ ಕಂ.(ನಿ) ಮಂಡ್ಯ	169.20
3.	ಕಂಪ್ಲಿ ಸಸಕಾ (ನಿ) ಕಂಪ್ಲಿ	47.99
4.	ಭದ್ರಾ ಸಸಕಾ(ನಿ) ದೊಡ್ಡಬಾತಿ	234.17
5.	ಚಾಮುಂಡೇಶ್ವರಿ ಶುಗರ್ಸ್ ಲಿ.	161.74
6.	ಗೋದಾವರಿ ಶುಗರ್ಸ್ ಸಮೀರವಾಡಿ	100.00

1	2	3
7.	ದಿ.ಘಟಪ್ರಭಾ ಸಸಕಾ (ನಿ)ಗೋಕಾಕ್	33.12
8.	ಶ್ರೀ.ಶ್ರೀರಾಮ ಸಸಕಾ(ನಿ) ಚುಂಚನಕಟ್ಟೆ	40.63
9.	ಪಾಂಡವಪುರ ಸಸಕಾ(ನಿ) ಪಿ.ಪುರ	50.00
10.	ಬೀದರ್ ಸಸಕಾ(ನಿ) ಹಳ್ಳಿಖೇಡ್	41.62
11.	ಕರ್ನಾಟಕ ಸಸಕಾ (ನಿ) ಹಾವೇರಿ	45.00
12.	ರಾಯಬಾಗ್ ಸಸಕಾ (ನಿ) ರಾಯಬಾಗ್	90.54
13.	ಹಾಲಸಿದ್ದನಾಥ ಸಸಕಾ (ನಿ) ನಿಪ್ಪಾಣಿ	96.52
14.	ವಾಣಿವಿಲಾಸ ಸಸಕಾ (ನಿ) ಹಿರಿಯೂರು	69.28
15.	ಬನ್ನಾರಿ ಅಮ್ಮನ್ ಶುಗರ್ಸ್ ಲಿ. ಆಲಗಂಚಿ	311.72
16.	ಧಾವಣಗೆರೆ ಶುಗರ್ ಕಂ(ನಿ)ಕುಕ್ಕವಾಡ	49.95
17.	ದೂದ್‌ಗಂಗಾಕೃಷ್ಣಾ ಸಸಕಾ(ನಿ) ಚಿಕ್ಕೋಡಿ	252.14
18.	ದಕ್ಷಿಣ ಕನ್ನಡ ಸಸಕಾ (ನಿ) ಬ್ರಹ್ಮಾವರ	50.00
	ಒಟ್ಟು	2022.12

ಆ. ಕಬ್ಬು ಅಭಿವೃದ್ಧಿ ನಿಧಿಯನ್ನು ಕಾರ್ಖಾನೆಗಳು ತನ್ನ ವ್ಯಾಪ್ತಿಯಲ್ಲಿನ ಕಬ್ಬಿನ ಕ್ಷೇತ್ರ ಅಭಿವೃದ್ಧಿಪಡಿಸಿ ಕೊಳ್ಳಲು ಸಂಶೋದನೆ ಮತ್ತು ನೀರಾವರಿ ಸೌಲಭ್ಯ, ರಸಗೊಬ್ಬರ ಇತ್ಯಾದಿ ಸೌಲಭ್ಯ ನೀಡಲು ವಿನಿಯೋಗಿಸಲಾಗುತ್ತಿದೆ.

ರೈತರ ಬಾಕಿ ಹಣ ಪಾವತಿ ಕುರಿತು.

365(667) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಈವರೆವಿಗೆ ಸಕ್ಕರೆ ಕಾರ್ಖಾನೆಗಳು ಅರೆದಿರುವ ಕಬ್ಬಿನ ಮತ್ತು ಉತ್ಪಾದಿಸಿದ ಸಕ್ಕರೆ ಪ್ರಮಾಣವೆಷ್ಟು?

ಆ. ಕಬ್ಬು ಸರಬರಾಜು ಮಾಡಿರುವ ರೈತರಿಗೆ ಕಬ್ಬಿನ ದರವನ್ನು ಪಾವತಿ ಮಾಡಿರುವ ಹಾಗೂ ಪಾವತಿ ಮಾಡಬೇಕಾದ ವಿವರಗಳೇನು? (ಕಾರ್ಖಾನೆವಾರು ಹಣ ನೀಡಿರುವ ಮತ್ತು ನೀಡದೇ ಇರುವ ವಿವರ ನೀಡುವುದು);

ಇ. ರೈತರಿಗೆ ಸಂದಾಯವಾಗಬೇಕಾದ ಬಾಕಿ ಹಣವನ್ನು ಯಾವಾಗ ಪಾವತಿ ಮಾಡಲಾಗುತ್ತಿದೆ?